ಅಂತವರನ್ನು ವರ್ಗಾವಣೆ ಮಾಡಿದೆ, ಬೇರೆ ಕಡೆ ವರ್ಗಾವಣೆ ಮಾಡಿಕೊಡಿ ಎಂದು ಕೇಳಿದವರನ್ನು ವರ್ಗ ಮಾಡಿದ್ದೇವೆ. ಸಾರ್ವಜನಿಕರಿಂದ ದೂರು ಬಂದಿದ್ದರೆ ಅಂತಹವರನ್ನು ವರ್ಗಾವಣೆ ಮಾಡಿದ್ದೇವೆ. ಯಾವ ದೂರು ಇಲ್ಲದಿದ್ದವರು ೨೧ ಜನ ಇದ್ದಾರೆ.

ಹೆಗ್ಗಡ ದೇವನಕೋಟೆಯಲ್ಲಿ ನಿರ್ಮಿಸಲಾಗುತ್ತಿರುವ ಸಾರ್ವಜನಿಕ ಆಸ್ಪತ್ರೆ

೨೩(೩೪೦) ಶ್ರೀ ಎಂ. ಶಿವಣ್ಣ (ಹೆಗ್ಗಡದೇವನಕೋಟೆ) ಮಾನ್ಯ ಆರೋಗ್ಯ ಹಾಗೂ ಅಬಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

೧. ಹೆಗ್ಗಡ ದೇವನ ಕೋಟೆಯಲ್ಲಿ ನಿರ್ಮಿಸಲಾಗುತ್ತಿರುವ ೫೦ ಹಾಸಿಗೆಯ ಸಾರ್ವತ್ರಿಕ ಆಸ್ಪತ್ರೆಗೆ ಕಟ್ಟಡ ನಿರ್ಮಾಣ ಯಾವಾಗ ಪ್ರಾರಂಭವಾಯಿತು ? ಈಗ ಯಾವ ಹಂತದಲ್ಲಿದೆ ?

೨. ಈ ಕಟ್ಟಡ ನಿರ್ಮಾಣವನ್ನು ಯಾವಾಗ ಪೂರ್ಣಗೊಳಿಸಲಾಗುವುದು ?

೩. ನಿರ್ಮಾಣದಲ್ಲಿ ವಿಳಂಬವಾಗುತ್ತಿರುವುದಕ್ಕೆ ಕಾರಣಗಳೇನು ?

ಶ್ರೀ ಹೆಚ್. ಟಿ. ಕೃಷ್ಣಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು).—

೧) ಕಟ್ಟಡ ನಿರ್ಮಾಣ ದಿನಾಂಕ ೨೨-೧೧-೧೯೮೨ ರಂದು ಪ್ರಾರಂಭವಾಯಿತು. ಈಗ ಪೂರ್ಣಗೊಳ್ಳುವ ಹಂತದಲ್ಲಿದೆ.

೨) ೧೯೮೬-೮೭ನೇ ಸಾಲಿನಲ್ಲಿ ಪೂರ್ಣಗೊಳಿಸಲಾಗುವುದು.

೩) ಸಾಕಷ್ಟು ಸಿಮೆಂಟ್ ಮತ್ತು ಉಕ್ಕು ಸರಬರಾಜು ಇಲ್ಲದ ಕಾರಣ.

ಶ್ರೀ ಎಂ. ಶಿವಣ್ಣ.—ಮಾನ್ಯ ಅಧ್ಯಕ್ಷರೇ, ಹೆಗ್ಗಡದೇವನಕೋಟೆಯಲ್ಲಿ ನಿರ್ಮಿಸಲಾಗುತ್ತಿರುವ ಆಸ್ಪತ್ರೆಯ ಕಟ್ಟಡ ನಿರ್ಮಾಣದ ವಿಳಂಬಕ್ಕೆ ಸಿಮೆಂಟ್ ಮತ್ತು ಉಕ್ಕು ಸರಬರಾಜು ಇಲ್ಲದ ಕಾರಣ ಎಂದು ಹೇಳುತ್ತಿದ್ದಾರೆ. ಒಂದು ವರ್ಷದಿಂದಲೂ ಇದೇ ವಿಚಾರವನ್ನು ಸಂಬಂಧಪಟ್ಟ ಅಧಿಕಾರಿಗಳು ಹೇಳುತ್ತಿದ್ದಾರೆ. ಈ ಆಸ್ಪತ್ರೆ ಕಟ್ಟಡ ಈಗಾಗಲೇ ಆರು ತಿಂಗಳ ಹಿಂದೆ ಆಗಬೇಕಾಗಿತ್ತು. ಈ ಪ್ರಶ್ನೆ ಬಗ್ಗೆ ಲೋಕೋಪಯೋಗಿ ಮಂತ್ರಿಗಳು ಉತ್ತರ ಹೇಳಬೇಕಾಗಿತ್ತು ಕಾರಣಾಂತರದಿಂದ ಆರೋಗ್ಯ ಮಂತ್ರಿಗಳು ಉತ್ತರಕೊಡುತ್ತಿದ್ದಾರೆ. ಈ ವಿಚಾರ ಇವರಿಗೆ ಸೇರುವುದಿಲ್ಲವೆಂದು ನನ್ನ ಭಾವನೆ. ಸಂಬಂಧಪಟ್ಟ ಮಂತ್ರಿಗಳು ಇದನ್ನು ಆದಷ್ಟು ಬೇಗ ಮಾಡಿಕೊಡಬೇಕು ಹಾಗೂ ವೈದ್ಯರುಗಳಿಗೆ ಕ್ವಾರ್ಟರ್ಸ್ ಕಟ್ಟಿಸಿಕೊಡಬೇಕು.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಮಾನ್ಯ ಅಧ್ಯಕ್ಷರೇ, ಈಗಾಗಲೇ ಕಟ್ಟಡ ಪೂರ್ಣವಾಗಿದೆ. ಉಳಿದಿರುವುದು ಕೇವಲ ಸ್ಯಾನಿಟರಿ ಮತ್ತು ಎಲೆಕ್ಟ್ರಿಫಿಕೇಷನ್ ಮಾತ್ರ ಒಂದೆರಡು ತಿಂಗಳೊಳಗೆ ಕಟ್ಟಡ ಪೂರ್ಣವಾಗುತ್ತದೆ. ಅನಂತರ ಉಪಯೋಗಕ್ಕೆ ಯೋಗ್ಯವಾಗುತ್ತದೆ. ೧೯೮೨ರಿಂದ ಪ್ರಾರಂಭವಾಗಿ ಏಕೆ ನಿಧಾನವಾಯಿತು ಎನ್ನುವ ಪ್ರಶ್ನೆಗೆ ನಾನು ಉತ್ತರ ಕೊಟ್ಟಿದ್ದೇನೆ. ಸಿಮೆಂಟ್ ಮತ್ತು ಉಕ್ಕು ಸಕಾಲದಲ್ಲಿ ಒದಗಿಸುವುದಕ್ಕೆ ಆಗದೆ ನಿಧಾನವಾಯಿತು. ೧೫ ಲಕ್ಷ ಅಂದಾಜುವೆಚ್ಚದಲ್ಲಿ ಪ್ರಾರಂಭವಾದ ಕಟ್ಟಡ, ಇವತ್ತು ೨೩ ಲಕ್ಷ ಖರ್ಚಾಗಿದೆ. ಈಗ ಕೆಲಸ ಮುಗಿದಿದೆ.

ಮೈಸೂರು ಅರಮನೆಯ ಪ್ರವೇಶ ಧನದಿಂದ ಸಂಗ್ರಹವಾದ ಹಣ

೨೪(೧೬೪ ಬಿ) ಶ್ರೀ ವೇದಾಂತ ಹೆಮ್ಮಿಗೆ(ಕೃಷ್ಣರಾಜ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಮೈಸೂರು ಅರಮನೆಯ ಪ್ರವೇಶ ಧನದಿಂದ ಕಳೆದ ಮೂರು ವರ್ಷಗಳಿಂದ ಸಂಗ್ರಹವಾದ ಹಣವೆಷ್ಟು ?

ಆ) ಇದರಲ್ಲಿ ಅರಮನೆ ನವೀಕರಣಕ್ಕೆ ಖರ್ಚಾಗಿರುವ ಹಣವೆಷ್ಟು ?

ಇ) ಈ ಅರಮನೆ ಸರ್ಕಾರಕ್ಕೆ ಸೇರಿದ್ದೆ ಅಥವಾ ರಾಜ್ಯ ವಂಶಕ್ಕೆ ಸೇರಿದ್ದೆ ?

ಶ್ರೀ ರಾಮಕೃಷ್ಣಹೆಗಡೆ(ಮುಖ್ಯ ಮಂತ್ರಿಗಳು).—

ಆ) ಕಳೆದ ಮೂರು ವರ್ಷಗಳಿಂದ ಮೈಸೂರು ಅರಮನೆಯ ಪ್ರವೇಶ ಧನದಿಂದ ಸಂಗ್ರಹವಾದ ಹಣವು ವರ್ಷವಾರು ಈ ಕೆಳಕಂಡಂತೆ ಇದೆ :—

೧೯೮೩–೮೪	ರೂ.	೫೯,೯೭,೪೪೯–೦೦
೧೯೮೪–೮೫	ರೂ.	೩೪,೦೪,೯೮೬–೦೦
೧೯೮೫–೮೬	ರೂ.	೩೮,೭೧,೯೩೬–೦೦
ಒಟ್ಟು	ರೂ.	೧,೦೨,೭೪,೩೭೧–೦೦

ಆ) ಕಳೆದ ಮೂರು ವರ್ಷಗಳಿಂದ ಅರಮನೆಯ ಸಿಬ್ಬಂದಿ, ರಿಪೇರಿ ಮತ್ತು ಉಸ್ತುವಾರಿಗಾಗಿ ರೂ. ೯೬,೮೩,೭೭೫–೦೦ ಖರ್ಚು ಮಾಡಲಾಗಿದೆ ಇದರ ಜೊತೆಗೆ ಅರಮನೆಯ ದೀಪಾಲಂಕಾರ ವ್ಯವಸ್ಥೆಯ ಕೆಟ್ಟಿರುವ ವಿದ್ಯುತ್ ಕೇಬಲ್‌ಗಳ ಬದಲಾವಣೆಗಾಗಿ ೪೫ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ.

ಇ) ದಿನಾಂಕ ೨೩–೧೧–೧೯೫೦ರಲ್ಲಿ ಹಿಂದಿನ ಮೈಸೂರು ಮಹಾರಾಜರ ಮತ್ತು ಭಾರತದ ಗೌರ್ನರ್ ಜನರಲ್ ಇವರ ನಡುವೆ ಬೇರ್ಪಟ್ಟು ಕರಾರಿನ ಮೇರೆಗೆ ತಯಾರಿಸಿದ ಆಸ್ತಿ ಪಟ್ಟಿಯ ಪ್ರಕಾರ ಮೈಸೂರು ಅರಮನೆಯನ್ನು ಪರಬಾರೆ ಮಾಡಿದಂತೆ ಷರತ್ತು ವಿಧಿಸಿ ಸದರಿ ಸ್ವತ್ತು ಮಹಾರಾಜರ ಸ್ವಂತ ಆಸ್ತಿಯೆಂದು ಪರಿಗಣಿಸಿದೆ. ಮತ್ತು ಈ ಆಸ್ತಿಯು ಮಹಾರಾಜರ ಹಾಗೂ ಅವರ ಉತ್ತರಾಧಿಕಾರಿಯ ಬಳಕೆಗೆ ಪರೀಕ್ಷಿಸಬೇಕೆಂದು ಸೂಚಿಸಿದೆ.

ಶ್ರೀ ವೇದಾಂತ ಹೆಮ್ಮಿಗೆ.—ಮಾನ್ಯ ಅಧ್ಯಕ್ಷರೇ, ಕಳೆದ ಮೂರು ವರ್ಷಗಳಿಂದ ಸಂಗ್ರಹವಾದ ಹಣ ೧,೦೨,೭೪,೩೭೧–೦೦ ರೂಪಾಯಿಗಳು ಎಂದು ಹೇಳಿದ್ದೀರಿ. ಹಾಗೂ ಮೈಸೂರು ಅರಮನೆಯನ್ನು ಪರಭಾರೆ ಮಾಡದಂತೆ ಷರತ್ತು ವಿಧಿಸಿ ಸದರಿ ಸ್ವತ್ತು ಮಹಾರಾಜರ ಸ್ವಂತ ಆಸ್ತಿಯೆಂದು ಪರಿಗಣಿಸಿದೆ ಎಂದೂ ತಮ್ಮ ಉತ್ತರದಲ್ಲಿ ತಿಳಿಸಿದ್ದೀರಿ. ಈ ರೀತಿ ಸಂಗ್ರಹವಾದ ಹಣದಲ್ಲಿ ರಾಜ ವಂಶಕ್ಕೆ ಯಾವುದಾದರೂ ಹಣ ಹೋಗುತ್ತಿದೆಯೇ ಎಂಬ ಬಗ್ಗೆ ಕೇಳುತ್ತಿದ್ದೇನೆ.

ಶ್ರೀ ರಾಮಕೃಷ್ಣಹೆಗ್ಗಡೆ.—ಮಾನ್ಯ ಅಧ್ಯಕ್ಷರೇ, ಇಲ್ಲಿ ರಾಜವಂಶಕ್ಕೆ ಹೋಗತಕ್ಕಂಥ ಪ್ರಶ್ನೆ ಉದ್ಭವವಾಗುವುದಿಲ್ಲ.

ಶ್ರೀ ವೇದಾಂತಹೆಮ್ಮಿಗೆ.—ಕಳೆದ ಮೂರು ವರ್ಷಗಳಿಂದ ಅರಮನೆಯ ಸಿಬ್ಬಂದಿ, ರಿಪೇರಿ ಮತ್ತು ಉಸ್ತುವಾರಿಗಾಗಿ ೯೬,೮೩,೭೭೫–೦೦ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ ಎಂದು ಹೇಳಿದ್ದೀರಿ. ಈ ಸಿಬ್ಬಂದಿಯಲ್ಲಿ ಖಾಯಂ ಸಿಬ್ಬಂದಿ ಎಷ್ಟು, ಹಂಗಾಮಿ ಸಿಬ್ಬಂದಿ ಎಷ್ಟು ? ಈ ಸಿಬ್ಬಂದಿ ವರ್ಗಗಳಿಗೆ ಕನಿಷ್ಟವೇತನ ಕೊಡುತ್ತೀರಾ ? ಮತ್ತು ಅರಮನೆ ಕಟ್ಟಡ ಬಹಳ ಹಳೆಯ ಕಟ್ಟಡವಾದರೂ ಕಲಾನೈಪುಣ್ಯತೆಯಿಂದ ಕೂಡಿದೆ, ಆದುದರಿಂದ, ರಿಪೇರಿ ಮಾಡಿಸುವಾಗ ಕಲಾನೈಪುಣ್ಯತೆಯನ್ನು ಗಮನದಲ್ಲಿಟ್ಟುಕೊಂಡಿರುವಂತಹವರಿಂದ ರಿಪೇರಿ ಮಾಡಿಸುತ್ತೀರಾ ಅಥವಾ ಯಾವ ರೀತಿ ಮಾಡಿಸುತ್ತೀರಿ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಮೊನಲನೆ ಪ್ರಶ್ನೆಗೆ ಉತ್ತರ, ಸಿಬ್ಬಂದಿಯಲ್ಲಿ ಕೆಲವು ಜನರು ತಾತ್ಕಾಲಿಕವಾಗಿ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಕೆಲವು ಜನರು ಖಾಯಂ ಆಗಿ ಕೆಲಸ ಮಾಡುತ್ತಿದ್ದಾರೆ. ಕೆಲವು ಜನರನ್ನು ಪರ್ಮನೆಂಟ್ ಮಾಡಿದ್ದೇವೆ. ಮೊನ್ನೆ ನಾನು ಮೈಸೂರಿಗೆ ಹೋದಾಗ ಸಿಬ್ಬಂದಿಯಲ್ಲಿ ಕೆಲವು ಜನರು ನನ್ನನ್ನು ಭೇಟಿಯಾದರೂ. ನಾವು ಸುಮಾರು ವರ್ಷಗಳಿಂದ ಕೆಲಸ ಮಾಡುತ್ತಿದ್ದೇವೆ. ನಮ್ಮನ್ನೂ ಪರ್ಮನೆಂಟ್ ಮಾಡಬೇಕೆಂದು ಕೇಳಿದ್ದಾರೆ. ನಾನು ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿ ಬಂದಿದ್ದೇನೆ. ರಿನೋವೇಷನ್ ಕೆಲಸ ನಾವು ತೆಗೆದುಕೊಂಡಿಲ್ಲ ಬರೀ ಮೈಂಟಿನೆನ್ಸ್ ಮಾತ್ರ. ಸ್ವಲ್ಪಮಟ್ಟಿಗೆ ಬಣ್ಣ ಹಚ್ಚುವುದಿದ್ದರೆ, ಆ ಕೆಲಸ ಮಾಡುವುದು. ವಿದ್ಯುತ್ ದೀಪಾಲಂಕಾರದ ಎಲ್ಲಾ ವ್ಯವಸ್ಥೆ ಕೆಟ್ಟು ಹೋಗಿತ್ತು. ನಾವು ಹೋದ ವರ್ಷ ಅಮೂಲಾಗ್ರವಾಗಿ ಇದನ್ನು ಬದಲಾಯಿಸಿದ್ದೇವೆ. ಏನಾದರೂ ಮೇಜರ್ ರಿಪೇರಿ, ರಿನೋವೇಷನ್ ಪ್ರಸಂಗ ಬಂದರೆ, ಯಾರು ಪರಿಣಿತರು ಇದ್ದಾರೆ ಅಂತಹವರಿಂದ ಮಾಡಿಸುತ್ತೇವೆ.

ಶ್ರೀ ವೇದಾಂತ ಹೆಬ್ಬಿಗೆ.—ಆರಮನೆಯನ್ನು ನೋಡುವುದಕ್ಕೆ, ನಮ್ಮ ದೇಶದಿಂದಲೂ ಹಾಗೂ ಹೊರ ದೇಶಗಳಿಂದಲೂ ಜನ ಬರುತ್ತಾರೆ. ಮೈಸೂರು ಕುಶಲ ಕೈಗಾರಿಕಾ ಸಾಮಾನುಗಳು ಬಹಳ ಪ್ರಸಿದ್ಧಿಯಾಗಿವೆ. ಆದರೆ, ಆರಮನೆ ಬಾಗಿಲಿನಲ್ಲಿ ಮಾರತಕ್ಕ ಸಾಮಾನುಗಳು ಸಾಮಾನ್ಯವಾಗಿ, ಮರಕ್ಕೆ ಸ್ವಲ್ಪ ಗಂಧದ ಎಣ್ಣೆ ಸವರಿ, ಬೋಟಾ ಸಾಮಾನು ಮಾರತಕ್ಕ ವ್ಯವಸ್ಥೆ ಇದೆ. ಆರಮನೆಯನ್ನು ನೋಡುವುದಕ್ಕೆ ಬರತಕ್ಕಂಥ ಪ್ರವಾಸಿಗರಿಗೆ, ಒಳ್ಳೆಯ ಕುಶಲ ಕೈಗಾರಿಕಾ ಸಾಮಾನುಗಳು ದೊರಕುವುದಕ್ಕೆ ಸರ್ಕಾರದ ವತಿಯಿಂದ ದೊರಕುವುದಕ್ಕೆ ವ್ಯವಸ್ಥೆ ಮಾಡಿದ್ದೀರಾ ? ಒಂದು ವೇಳೆ ಮಾಡದೇ ಹೋದರೆ ಆದಷ್ಟು ಜಾಗ್ರತೆ ಅಂತಹ ಒಂದು ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ರಾಮಕೃಷ್ಣ ಹೆಗ್ಗಡೆ.—ಮೈಸೂರು ಕರಕುಶಲ ಕೈಗಾರಿಕಾ ನಿಗಮದ ಒಂದು ಮಳಿಗೆ ಅಲ್ಲಿದೆ ಮಾನ್ಯ ಸದಸ್ಯರು ಮತ್ತು ಇನ್ನಿತರ ಸ್ನೇಹಿತರು ಅಲ್ಲಿ ಬರತಕ್ಕಂಥ ಪ್ರವಾಸಿಗರಿಗೆ ಹೇಳಬೇಕು. ನೀವು ದಯವಿಟ್ಟು ಬೇರೆ ಸಾಮಾನುಗಳನ್ನು ಖರೀದಿ ಮಾಡಬೇಡಿ ಸರ್ಕಾರದ ಅಂಗಡಿ ಎಲ್ಲಿದೆಯೋ ಅಲ್ಲಿ ಮಾತ್ರ ಕೊಂಡುಕೊಳ್ಳಿ ಎಂದು ಹೇಳಬೇಕು.

ಗಂಡು ಮಕ್ಕಳು ಮತ್ತು ಹೆಣ್ಣು ಮಕ್ಕಳಿಗೆ ಆಸ್ತಿಯಲ್ಲಿ ಸಮಪಾಲು

೨೫ (೨೧(ಬಿ) ಶ್ರೀ ಕೆ. ಹೆಚ್. ಪಾಟೀಲ್ (ಗದಗ).—ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳು ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

(ಅ) ಗಂಡು ಮಕ್ಕಳು ಮತ್ತು ಹೆಣ್ಣುಮಕ್ಕಳಿಗೆ ಸಮಪಾಲನ್ನು ನೀಡಲು ಆಂಧ್ರ ಪ್ರದೇಶ ಸರ್ಕಾರದಲ್ಲಿರುವ ಮಾದರಿಯ ಒಂದು ಶಾಸನವನ್ನು ತರಬೇಕೆಂಬ ಯಾವುದೇ ಪ್ರಸ್ತಾವವು ಸರ್ಕಾರದ ಮುಂದಿದೆಯೇ ?

(ಆ) ಇರದಿದ್ದರೆ, ಮಹಿಳೆಯರ ಹಿತರಕ್ಷಣೆಗಾಗಿ ಸರ್ಕಾರವು ಈಗಲಾದರೂ ಅಂಥದೇ ಶಾಸನವನ್ನು ತರುವುದೇ ?

ಶ್ರೀ ಎ. ಲಕ್ಷ್ಮಿಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಆಹಾರ ಮತ್ತು ಮತ್ತು ನಾಗರಿಕ ಸರಬರಾಜು ಸಚಿವರು).—

(ಅ) ಹೌದು.

(ಆ) (ಎ) ಖಂಡದ ಉತ್ತರವನ್ನು ನೋಡಿದಾಗ ಈ ಪ್ರಶ್ನೆಯೇ ಉದ್ಭವಿಸುವುದಿಲ್ಲಾ.

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಎರಡನೆಯ ಪ್ರಶ್ನೆಗೆ ಉದ್ಭವಿಸುವುದಿಲ್ಲ ಎಂದು ಹೇಳಿದ್ದಾರೆ. ಈ ಪ್ರಶ್ನೆಯ ಇಂಗಿತವನ್ನು ಅರಿತು ಹೇಳಿದ್ದರೆ ಹೆಚ್ಚು ನೆಟ್ಟಗಾಗುತ್ತಿತ್ತು, ತಮ್ಮ ಗಮನಕ್ಕೆ ಬಂದ ಮೇಲೂ ಈ ಕಾನೂನನ್ನು ತರುವುದಕ್ಕೆ ಏತಕ್ಕೆ ವಿಳಂಬ ಮಾಡುತ್ತಿದ್ದೀರಿ ? ಹೆಣ್ಣು ಮಕ್ಕಳಿಗೆ ಆಸ್ತಿಯಲ್ಲಿ ಸಮಪಾಲು ಬರುವಂತಹ ಉಪಯುಕ್ತವಾದ ಕಾನೂನು ತರುವುದು ಬಹಳ ಒಳ್ಳೆಯದು.

ಶ್ರೀ ಎ. ಲಕ್ಷ್ಮೀಸಾಗರ್.—ಮಾಡುತ್ತೇನೆಂದು ಉತ್ತರ ಹೇಳಿದ್ದೇನೆ ಅವರ ಮನಸ್ಸಿನಲ್ಲಿರುವುದು ಬೇಗ ಮಾಡಲಿ ಎಂದು, ಆಗಲಿ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಪಾಟೀಲರು ಅವರ ಆಸ್ತಿಯನ್ನು ಅವರ ಹೆಣ್ಣು ಮಕ್ಕಳಿಗೆ ಬಿಡುತ್ತಾರೋ, ಗಂಡು ಮಕ್ಕಳಿಗೆ ಬಿಡುತ್ತಾರೋ ಗೊತ್ತಿಲ್ಲ.

ಶ್ರೀ ಕೆ. ಹೆಚ್. ಪಾಟೀಲ್.—ನನಗೆ ಹೆಣ್ಣು ಮಕ್ಕಳಿಲ್ಲ, ಎಲ್ಲಾ ಹೆಣ್ಣು ಮಕ್ಕಳೂ ನನ್ನ ಅಕ್ಕ ತಂಗಿಯರು ಎಂದು ಈ ರೀತಿ ಹೇಳಿದ್ದೇನೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ವಾಹನಗಳಿಗೆ ಹಾರನ್‌ಗಳ ಜೋಡಣೆ.

೨೬ (೩೪೮) ಶ್ರೀ ಕೆ. ಪಂಪಸತ ಬಂಗೇರ (ಬೆಳ್ತಂಗಡಿ).—ಮಾನ್ಯ ಸಾರಿಗೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—